148ನೇ ಅಧಿವೇಶನ
ನಿ-72
ಕ್ರ-166 ಕಂಪ್ಯೂಟರ್

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರು ನಿಯಮ 72ರಡಿ ಮಂಡಿಸಿರುವ ಗಮನಸೆಳೆಯುವ ಸೂಚನೆ ಸಂಖ್ಯೆ:166ಕ್ಕೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಉತ್ತರ:**

**ಪ್ರಶ್ನೆ:**

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಇಂಡಸ್ಟ್ರಿಯಲ್ ಟ್ರೂಸ್ ಅಗ್ರಿಮೆಂಟ್ ಪ್ರಕಾರ ಕೈಗೊಳ್ಳ ಬೇಕಾಗಿರುವ ವೇತನ ಪರಿಷ್ಕರಣೆ 2020ನೇ ಸಾಲಿನ ಜನವರಿಯಿಂದು ಜಾರಿಗೆ ಬರುವಂತೆ ಕೈಗೊಳ್ಳಬೇಕಾಗಿರುತ್ತದೆ. ಆದರೆ, ಇದುವರೆವಿಗೂ ಸುಮಾರು ಮೂರು ವರ್ಷಗಳ ಕಾಲ ಕಳೆದರೂ ವೇತನ ಪರಿಷ್ಕರಣೆ ಮಾಡದೇ ಸರ್ಕಾರವು ನೌಕರರ ಮೇಲೆ ಪರಿಷ್ಕರಣೆ ಸಲುವಾಗಿ ನಡೆಸಿದ ಮುಷ್ಕರಕ್ಕೆ ಸೇಡನ್ನು ತೀರಿಸಿಕೊಳ್ಳುತ್ತಿರುವುದು ವ್ಯಕ್ತವಾಗುತ್ತಿರುವುದು ಸ್ಪಷ್ಟವಾಗಿರುವ ಕುರಿತು ನಿಯಮ 72 ರಲ್ಲಿ ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ರಾಜ್ಯ ರಸ್ತೆ ಸಾರಿಗೆ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದೆ ಮತ್ತು ದಿನಾಂಕ.01.01.2020ರಿಂದ ವೇತನ ಪರಿಷ್ಕರಣೆ ಆಗಬೇಕಿದೆ. ಕ.ರಾ.ರ.ಸಾ.ನಿಗಮದ ಪ್ರಮುಖ ಕಾರ್ಮಿಕ ಸಂಘಟನೆಗಳು ತಮ್ಮ ಬೇಡಿಕೆಗಳ ಪಟ್ಟಿಯನ್ನು 2019ರ ಡಿಸೆಂಬರ್ ಅಂತ್ಯದಲ್ಲಿ ನೀಡಿದ್ದು, ತತ್ಸಂಬಂಧ ಪ್ರಾಥಮಿಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ, ಈ ಮಧ್ಯೆ ರಾಜ್ಯ ರಸ್ತೆ ಸಾರಿಗೆ ನೌಕರರನ್ನು ರಾಜ್ಯ "ಸರ್ಕಾರಿ ನೌಕರ"ರೆಂದು ಪರಿಗಣಿಸಬೇಕು ಮತ್ತು ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ತಮಗೆ ನೀಡಬೇಕು ಮತ್ತು ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ನಿಗಮಗಳ ನೌಕರರ ಕೆಲವು ಒಕ್ಕೂಟಗಳು ಮುಷ್ಕರ ಹೂಡಿರುತ್ತಾರೆ.

ಈ ಹಂತದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವು ಸಹ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿ. ಕ್ರಮೇಣ ನಿಗಮದ ಬಸ್ಸುಗಳ ಆಚರಣೆಯನ್ನು ಸ್ಥಗಿತಗೊಳಿಸಿದ್ದರಿಂದ, ನಿಗಮಗಳಿಗೆ ಯಾವುದೇ ಸಾರಿಗೆ ಆದಾಯ ಬಾರದೇ ನೌಕರರ ವೇತನ ನೀಡಲು ಸಹ ಆರ್ಥಿಕ ಮುಗ್ಗಟ್ಟು ಎದುರಾಗಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನೌಕರರ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಿ ಅನುಕೂಲ ಮಾಡಿಕೊಟ್ಟಿರುತ್ತದೆ.

ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ 04 ಸಾರಿಗೆ ಸಂಸ್ಥೆಗಳು ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡ ಆಂತರಿಕ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಂಖ್ಯೆ: ಟಿಡಿ 359 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು